All India Radio: Bangalore

National Bulletin In Kannada

10.02.2025  19.35 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಎರಡು ದಿನಗಳ ಅಂತಾರಾಷ್ಟ್ರೀಯ ಯುನಾನಿ ಸಮ್ಮೇಳನಕ್ಕೆ ನಾಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಚಾಲನೆ
- ಬೆಂಗಳೂರಿನಲ್ಲಿ ಇದೇ ೧೪ರವರೆಗೆ ಏರೋ ಇಂಡಿಯಾ ವೈಮಾನಿಕ ಪ್ರದರ್ಶನ; ದೇಶದ ರಕ್ಷಣಾ ಸಾಮರ್ಥ್ಯದ ಅನಾವರಣ
- ವೈಮಾನಿಕ ರಕ್ಷಣಾ ಮಸೂದೆ ೨೦೨೪ ಇಂದು ರಾಜ್ಯಸಭೆಯಲ್ಲಿ ಮಂಡನೆ
- ಪ್ಯಾರಾ-ಬಿಲ್ಲುಗಾರಿಕೆ ಏಷಿಯಾ ಕಪ್ ಟೂರ್ನಿಯಲ್ಲಿ ಭಾರತಕ್ಕೆ ಎರಡು ಪದಕ

*******************

ನವದೆಹಲಿಯಲ್ಲಿ ಯುನಾನಿ ದಿನವಾದ ನಾಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಸಹ ಭಾಗವಹಿಸಲಿದ್ದಾರೆ.

ಯುನಾನಿ ದಿನದ ಒಂದು ವರದಿ;

ಖ್ಯಾತ ಯುನಾನಿ ವೈದ್ಯ, ಶಿಕ್ಷಣ ತಜ್ಞ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಹಕೀಮ್ ಅಜ್ಮಲ್ ಖಾನ್ ಅವರ ಜನ್ಮ ಸ್ಮರಣಾರ್ಥ ಪ್ರತಿ ವರ್ಷ ಫೆಬ್ರವರಿ ೧೧ ಅನ್ನು ಯುನಾನಿ ದಿನವನ್ನಾಗಿ ಆಚರಿಸಲಾಗುತ್ತದೆ. ಯುನಾನಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಅವರು ನೀಡಿದ ಕೊಡುಗೆಗಳನ್ನು ಈ ದಿನ ಗುರುತಿಸುತ್ತದೆ.

ಜಾಗತಿಕ ಆರೋಗ್ಯ ಮತ್ತು ಯೋಗಕ್ಷೇಮದ ಪ್ರಚಾರದಲ್ಲಿ ಯುನಾನಿ ಔಷಧದ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುವ ಉದ್ದೇಶದಿಂದ ಇದು ಸಂವಾದ, ಸಹಯೋಗ ಮತ್ತು ಜ್ಞಾನ ವಿನಿಮಯಕ್ಕೆ ವೇದಿಕೆಯಾಗಲಿದೆ.

ಕೇಂದ್ರೀಯ ಯುನಾನಿ ಔಷಧೀಯ ಸಂಶೋಧನಾ ಪರಿಷತ್ತು, ಆಯುಷ್ ಸಚಿವಾಲಯದಡಿಯಲ್ಲಿ 'ಸಮಗ್ರ ಆರೋಗ್ಯ ಪರಿಹಾರಗಳಿಗಾಗಿ ಯುನಾನಿ ಔಷಧದಲ್ಲಿ ಆವಿಷ್ಕಾರಗಳು-ಮುಂದಿನ ಹಾದಿ' ಎಂಬ ಧ್ಯೇಯದಲ್ಲಿ ಸಮ್ಮೇಳನವನ್ನು ಆಯೋಜಿಸುತ್ತಿದೆ.

*******************

ಏಷ್ಯಾದ ಅತಿದೊಡ್ಡ ವೈಮಾನಿಕ ಪ್ರದರ್ಶನದ ೧೫ನೇ ಆವೃತ್ತಿ - ಏರೋ ಇಂಡಿಯಾ ೨೦೨೫ಕ್ಕೆ ಇಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು. ಈ ಪ್ರದರ್ಶನ ಕರ್ನಾಟಕದ ಬೆಂಗಳೂರಿನ ಯಲಹಂಕಾ ವಾಯುನೆಲೆಯಲ್ಲಿ ಇದೇ ೧೪ರ ವರೆಗೆ ನಡೆಯಲಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ರಾಜನಾಥ್ ಸಿಂಗ್, ಭಾರತೀಯ ರಕ್ಷಣಾ ಪರಿಸರ ವ್ಯವಸ್ಥೆಯು ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಇದು ನೀಡುತ್ತಿರುವ ಅವಕಾಶಗಳನ್ನು ಬಳಸಿಕೊಳ್ಳುವಂತೆ ಮತ್ತು ಇಂದಿನ ಅಸ್ಥಿರ ಭೌಗೋಳಿಕ ರಾಜಕೀಯ ಸ್ಥಿತಿಯಿಂದಾಗಿ ಉಂಟಾಗುತ್ತಿರುವ ಸವಾಲುಗಳಿಗೆ ಉದ್ದೇಶಿತ ಪರಿಹಾರಗಳನ್ನು ಕಂಡುಕೊಳ್ಳುವಂತೆ ಜಾಗತಿಕ ಮೂಲ ಸಲಕರಣೆ ತಯಾರಕರಿಗೆ ಕರೆ ನೀಡಿದ್ದಾರೆ.

ಅಭಿವೃದ್ಧಿ ಹೊಂದುತ್ತಿರುವ ದೇಶ ಎಂದು ಕರೆಸಿಕೊಳ್ಳುತ್ತಿರುವ ಭಾರತವು, ೨೦೪೭ ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶಕ್ಕೆ ಪರಿವರ್ತನೆಗೊಳ್ಳಲು ಅನುಕೂಲವಾಗುವಂತೆ ದೇಶೀಯ ರಕ್ಷಣಾ ಉದ್ಯಮವನ್ನು ರಾಷ್ಟ್ರೀಯ ಆರ್ಥಿಕತೆಯ ಪ್ರಮುಖ ಅಂಶವನ್ನಾಗಿ ಮಾಡಲು ಸರ್ಕಾರ ತೆಗೆದುಕೊಂಡ ವಿವಿಧ ಕ್ರಮಗಳನ್ನು ರಕ್ಷಣಾ ಸಚಿವರು ವಿವರಿಸಿದರು. "ಹೊಸ ರಕ್ಷಣಾ ಪರವಾನಗಿಯನ್ನು ಬಯಸುವ ಕಂಪೆನಿಗಳಿಗೆ ಸ್ವಯಂಚಾಲಿತ ಮಾರ್ಗದ ಮೂಲಕ ಶೇ. ೭೫ ವರೆಗೆ ಎಫ್‌ಡಿಐ ಅನ್ನು ಅನುಮತಿಸಲಾಗಿದೆ ಎಂದರು.

ಇಲ್ಲಿಯವರೆಗೆ ರಕ್ಷಣಾ ವಲಯದಲ್ಲಿ ಒಟ್ಟು ೪೬ ಜಂಟಿ ಉದ್ಯಮಗಳು ಮತ್ತು ಕಂಪೆನಿಗಳಿಗೆ ವಿದೇಶಿ ಹೂಡಿಕೆಗೆ ಅನುಮೋದನೆ ನೀಡಲಾಗಿದೆ". ಜಾಗತಿಕವಾಗಿ ಭಾರತ ಮೂರನೇ ಅತಿ ದೊಡ್ಡ

ನವೋದ್ಯಮ ಪರಿಸರ ವ್ಯವಸ್ಥೆ ಹೊಂದಿದೆ. ಇದರಲ್ಲಿ ವರ್ಷದಿಂದ ವರ್ಷಕ್ಕೆ ೧೦ ರಿಂದ ೧೨ ಪ್ರತಿಶತದಷ್ಟು ಪ್ರಗತಿ ಸಾಧಿಸುವ ನಿರೀಕ್ಷೆ ಇದೆ ಎಂದರು.

ಧ್ವನಿ: ರಾಜನಾಥ್ ಸಿಂಗ್

೧೯೯೬ ರಿಂದ ಬೆಂಗಳೂರಿನಲ್ಲಿ ಆಯೋಜಿಸಲಾದ ಯಶಸ್ವಿ ೧೪ ಆವೃತ್ತಿಗಳೊಂದಿಗೆ ಏರೋ ಇಂಡಿಯಾ ಒಂದು ಜಾಗತಿಕವಾಗಿ ಪ್ರಮುಖವಾದ ವೈಮಾನಿಕ ಪ್ರದರ್ಶನವಾಗಿ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ. ಕಳೆದ ಆವೃತ್ತಿಯು, ಏಳು ಲಕ್ಷಕ್ಕೂ ಅಧಿಕ ಸಂದರ್ಶಕರು, ೯೮ ದೇಶಗಳ ಗಣ್ಯರು, ಹೂಡಿಕೆದಾರರು, ನವೋದ್ಯಮಿಗಳು ಹಾಗೂ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಸೇರಿದಂತೆ ೮೦೯ ಪ್ರದರ್ಶಕರನ್ನು ಆಕರ್ಷಿಸುವ ಮೂಲಕ ಗಮನಾರ್ಹ ಮೈಲಿಗಲ್ಲು ಸಾಧಿಸಿತ್ತು. ೨೦೨೫ರ ಆವೃತ್ತಿಯು ಈ ಸಾಧನೆಗಳನ್ನು ಮೀರಿಸುವ ಗುರಿಯನ್ನು ಹೊಂದಿದ್ದು, ಪ್ರದರ್ಶನದ ವ್ಯಾಪ್ತಿ ಮತ್ತು ಭವ್ಯತೆ ಇನ್ನೂ ವಿಸ್ತರಿಸಿದೆ.

******************

ವೈಮಾನಿಕ ಕ್ಷೇತ್ರದ ರಕ್ಷಣಾ ಮಸೂದೆ ೨೦೨೫ ಅನ್ನು ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ ನಾಯ್ಡು ಇಂದು ರಾಜ್ಯಸಭೆಯಲ್ಲಿ ಮಂಡಿಸಿದರು.

ಈ ಮಸೂದೆಯು ದೇಶದಲ್ಲಿ ವಿಮಾನ ಹಣಕಾಸು ಮತ್ತು ಗುತ್ತಿಗೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಇದು ದೇಶೀಯ ಕಾನೂನುಗಳನ್ನು ಕೇಪ್‌ಟೌನ್ ಸಮ್ಮೇಳನ ಮತ್ತು ಏರ್‌ಕ್ರಾಫ್ಟ್ ಪ್ರೋಟೋಕಾಲ್‌ನೊಂದಿಗೆ ಜೋಡಿಸುವ ಗುರಿಯನ್ನು ಹೊಂದಿದೆ.

******************

ರಾಜ್ಯಸಭೆಯಲ್ಲಿಂದು ೨೦೨೫-೨೬ರ ಕೇಂದ್ರ ಆಯವ್ಯಯದ ಮೇಲಿನ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಯಿತು.

ಚರ್ಚೆಯನ್ನು ಆರಂಭಿಸಿದ ಕಾಂಗ್ರೆಸ್‌ನ ಪಿ. ಚಿದಂಬರಂ, ಜಿಡಿಪಿಯಲ್ಲಿ ದೇಶದ ಉತ್ಪಾದನೆಯ ಪಾಲು ಪ್ರಸ್ತುತ ಆಡಳಿತದ ಅವಧಿಯಲ್ಲಿ ಕುಸಿದಿದೆ ಎಂದು ಹೇಳಿದರು.

೨೦೨೫ ರ ಆರ್ಥಿಕ ಸಮೀಕ್ಷೆಯನ್ನು ಉಲ್ಲೇಖಿಸಿದ ಅವರು, ೨೦೧೪ ರಲ್ಲಿ ಉತ್ಪಾದನೆಯ ಪಾಲು ಶೇಕಡಾ ೧೫.೦೭ ರಷ್ಟಿತ್ತು ಆದರೆ ೨೦೧೯ ರಲ್ಲಿ ಅದು ಶೇಕಡಾ ೧೩.೪೬ ಕ್ಕೆ ಮತ್ತು ೨೦೨೩ ರಲ್ಲಿ ಶೇಕಡಾ ೧೨.೯೩ ಕ್ಕೆ ಇಳಿದಿದೆ. ಯುವಕರಲ್ಲಿ ನಿರುದ್ಯೋಗ ದರ ಶೇಕಡಾ ೧೦ ಕ್ಕಿಂತ ಹೆಚ್ಚು ಮತ್ತು ಪದವೀಧರರಲ್ಲಿ ಶೇಕಡಾ ೧೩ ಕ್ಕಿಂತ ಹೆಚ್ಚಿದೆ. ಸರ್ಕಾರ ನಿರುದ್ಯೋಗ ದರ ಕೇವಲ ಶೇಕಡಾ ೩.೨ ಎಂದು ಹೇಳುತ್ತಿದ್ದು, ನಿಖರ ದತ್ತಾಂಶ ನೀಡಿಲ್ಲ ಎಂದು ಅವರು ಹೇಳಿದರು. ಇದೇ ವೇಳೆ ಅಮೆರಿಕದಿಂದ ಭಾರತೀಯ ಪ್ರಜೆಗಳನ್ನು ಗಡೀಪಾರು ಮಾಡುವ ವಿಷಯದ ಬಗ್ಗೆಯೂ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ಸಭಾನಾಯಕ ಜೆ ಪಿ ನಡ್ಡಾ, ಉತ್ಪಾದನೆ ಸೇರಿದಂತೆ ವಿವಿಧ ವಲಯಗಳಲ್ಲಿ ಸರ್ಕಾರ ಕೈಗೊಂಡ ಹಲವಾರು ಕ್ರಮಗಳ ವಿವರ ನೀಡಿದರು. ವಲಸಿಗರನ್ನು ಗಡೀಪಾರು ಮಾಡುವಲ್ಲಿ ಅನುಸರಿಸಲಾಗುವ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳು ೨೦೧೨ ರಿಂದ ಚಾಲ್ತಿಯಲ್ಲಿವೆ ಎಂದು ಅವರು ಸ್ಪಷ್ಟಪಡಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ಬಿಜೆಪಿಯ ದಿನೇಶ್ ಶರ್ಮಾ, ಈ ಬಾರಿಯ ಬಜೆಟ್ ಮಹಿಳೆಯರು ಮತ್ತು ಸಮಾಜದ ಇತರ ವರ್ಗಗಳ ಸಬಲೀಕರಣಕ್ಕಾಗಿ ವಿಶೇಷ ನಿಬಂಧನೆಗಳನ್ನು ಹೊಂದಿದೆ ಎಂದು ಹೇಳಿದರು.

*******************

ಉಡಾನ್ ಯೋಜನೆಯಿಂದ ಎಲ್ಲರಿಗೂ ವಿಮಾನ ಪ್ರಯಾಣ ಕೈಗೆಟಕುವಂತಾಗುತ್ತದೆ ಎಂದು ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ್ ನಾಯ್ಡು ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ದೇಶಾದ್ಯಂತ ಸಾಧ್ಯವಾದಷ್ಟು ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಸರ್ಕಾರ ಬದ್ಧವಾಗಿದೆ. ಕಳೆದ ೧೦ ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತದ ಆಕಾಂಕ್ಷೆಗಳು ಬದಲಾಗಿವೆ ಮತ್ತು ದೇಶದಲ್ಲಿ ಹೆಚ್ಚು ವಿಮಾನ ನಿಲ್ದಾಣಗಳನ್ನು ನಿರ್ಮಿಸುವಲ್ಲಿ ಸಹಾಯಕವಾಗಿದೆ. ಉಡಾನ್ ಯೋಜನೆಯ ಅನುಷ್ಠಾನದಿಂದ, ವಾಯು ಸಾರಿಗೆ ವ್ಯವಸ್ಥೆ ಮೇಲ್ದರ್ಜೆಗೇರಿದ್ದು, ಮಧ್ಯಮ ಮತ್ತು ಕೆಳ ವರ್ಗದ ಜನರಿಗೂ ವಿಮಾನಯಾನ ಕೈಗೆಟಕುವಂತಾಗಿದೆ ಎಂದು ತಿಳಿಸಿದರು.

ಈ ಯೋಜನೆಯಡಿ ಸರ್ಕಾರವು ಹೂಡಿಕೆ ವಲಯದಲ್ಲಿ ೬ ಸಾವಿರ ಕೋಟಿವರೆಗೆ ಹೂಡಿಕೆ ಮಾಡಿದ್ದು, ಈ ನಿಟ್ಟಿನಲ್ಲಿ ದೊಡ್ಡ ಯಶಸ್ಸನ್ನು ಸಾಧಿಸಿದೆ. ದೇಶದಲ್ಲಿ ಸ್ವದೇಶಿ ಡ್ರೋನ್‌ಗಳ ತಯಾರಿಕೆಯನ್ನು ಉತ್ತೇಜಿಸಲಾಗುತ್ತಿದ್ದು, ಡ್ರೋನ್‌ಗಳ ಆಮದನ್ನು ಸರ್ಕಾರ ನಿಷೇಧಿಸಿದೆ ಎಂದು ಮಾಹಿತಿ ನೀಡಿದರು.

*******************

ಲೋಕಸಭೆಯಲ್ಲಿ ಇಂದು ೨೦೨೫-೨೬ನೇ ಸಾಲಿನ ಕೇಂದ್ರ ಬಜೆಟ್ ಮೇಲಿನ ಚರ್ಚೆ ಪುನರಾರಂಭವಾಯಿತು. ಡಿಎಂಕೆಯ ದಯಾನಿಧಿ ಮಾರನ್ ಅವರು, ಕೇಂದ್ರ ಬಜೆಟ್ ಸಂಪೂರ್ಣವಾಗಿ ಕಾರ್ಪೊರೇಟ್ ಸಂಸ್ಥೆಗಳಿಗೆ ಅನುಕೂಲಕರವಾಗಿದೆ ಮತ್ತು ನಿರುದ್ಯೋಗ ಹಾಗೂ ಹಣದುಬ್ಬರ ಸೇರಿದಂತೆ ಜನರು ಎದುರಿಸುತ್ತಿರುವ ನೈಜ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿದೆ ಎಂದು ಆರೋಪಿಸಿದರು.

ಭಾರತದ ಆರ್ಥಿಕತೆ ಕುಂಠಿತಗೊಳ್ಳುತ್ತಿದ್ದು, ಕಳೆದ ವರ್ಷದಲ್ಲಿ ಜಿಡಿಪಿ ಶೇಕಡಾ ೬.೪ ರಷ್ಟು ಮಾತ್ರ ಬೆಳವಣಿಗೆ ಕಂಡಿದೆ. ಯುಎಸ್ ಡಾಲರ್ ವಿರುದ್ಧ ರೂಪಾಯಿ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂದು ಅವರು ಹೇಳಿದರು.

ನೋಟು ರದ್ದತಿಯ ಸಮಯದಲ್ಲಿ ಘೋಷಿಸಿದ ಯಾವುದೇ ಗುರಿಯನ್ನು ಸಾಧಿಸಲು ಸರ್ಕಾರ ವಿಫಲವಾಗಿದೆ ಎಂದು ಕಾಂಗ್ರೆಸ್‌ನ ಮನೀಶ್ ತಿವಾರಿ ದೂರಿದರು.

ಬಜೆಟ್‌ನಲ್ಲಿ ಘೋಷಿಸಲಾದ ತೆರಿಗೆ ರಿಯಾಯಿತಿಯನ್ನು ಉಲ್ಲೇಖಿಸಿ, ತೆರಿಗೆದಾರರು ಕಳೆದ ಐದು ವರ್ಷಗಳಿಂದ ಇದರ ಜಾರಿಗೆ ಒತ್ತಾಯಿಸುತ್ತಿದ್ದರು ಎಂದರು. ಹಣಕಾಸಿನ ಕೊರತೆಯ ವಿಷಯದ ಬಗ್ಗೆ ಸರ್ಕಾರವನ್ನು ಪ್ರಶ್ನಿಸಿದ ಅವರು, ತಮ್ಮ ಭಾಷಣದಲ್ಲಿ ದೇಶದ ಕೃಷಿ ವಲಯವು ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಿದರು.

ಇದಕ್ಕೆ ಪ್ರತಿಯಾಗಿ ಮಾತನಾಡಿದ ಬಿಜೆಪಿ ಸಂಸದ ಅನುರಾಗ್ ಸಿಂಗ್ ಠಾಕೂರ್, ೨೦೨೫-೨೬ರ ಬಜೆಟ್‌ನಲ್ಲಿ ಪ್ರತಿಯೊಂದು ವಲಯಕ್ಕೂ ದಾಖಲೆಯ ಬಜೆಟ್ ಹಂಚಿಕೆ ಮಾಡಲಾಗಿದೆ, ಈ ಬಜೆಟ್ ರಾಷ್ಟ್ರೀಯ ಕಲ್ಯಾಣಕ್ಕಾಗಿ ಶ್ರಮಿಸುತ್ತದೆ ಎಂದು ಶ್ಲಾಘಿಸಿದರು.

ಎನ್‌ಡಿಎ ಸರ್ಕಾರದ ಅಡಿಯಲ್ಲಿ ಭಾರತದ ಆರ್ಥಿಕತೆಯು ಹೊಸ ಎತ್ತರವನ್ನು ತಲುಪಿ, ಜಾಗತಿಕವಾಗಿ ಐದನೇ ಸ್ಥಾನವನ್ನು ತಲುಪಿದೆ ಎಂದು ಅವರು ಹೇಳಿದರು. ಮುಂದಿನ ಮೂರು ವರ್ಷಗಳಲ್ಲಿ ಭಾರತ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ, ಸರ್ಕಾರವು ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಧಿಸುವಲ್ಲಿ ಶ್ರಮಿಸುತ್ತಿದೆ ಎಂದು ಠಾಕೂರ್ ತಿಳಿಸಿದರು.

******************

ನವದೆಹಲಿಯ ಭಾರತ್ ಮಂಟಪಂನಲ್ಲಿ ಇಂದಿನಿಂದ ಅಂತಾರಾಷ್ಟ್ರೀಯ ಆಡಳಿತ ವಿಜ್ಞಾನ ಸಂಸ್ಥೆ- ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕ ಕುಂದು-ಕೊರತೆಗಳ ಇಲಾಖೆ ಐಐಎಎಸ್- ಡಿಎಆರ್‌ಪಿಜಿ ಭಾರತ ಸಮ್ಮೇಳನ ೨೦೨೫ ಆರಂಭವಾಗಿದೆ.

ಈ ತಿಂಗಳ ೧೪ ರವರೆಗೆ ನಡೆಯಲಿರುವ ಸಮ್ಮೇಳನವನ್ನು ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಉದ್ಘಾಟಿಸಿದರು.

******************

ಭಾರತ ಮತ್ತು ಈಜಿಪ್ಟ್ ನಡುವಿನ ಜಂಟಿ ಸಮರಾಭ್ಯಾಸ 'ಸೈಕ್ಲೋನ್ ೨೦೨೫' ಇಂದಿನಿಂದ ರಾಜಸ್ಥಾನದ ಮಹಾಜನ್ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ಪ್ರಾರಂಭವಾಗಲಿದೆ.

******************

ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಪ್ಯಾರಾ-ಬಿಲ್ಲುಗಾರಿಕೆ ಏಷಿಯಾ ಕಪ್ ಟೂರ್ನಿಯಲ್ಲಿ ಭಾರತದ ಬಿಲ್ಲುಗಾರರು ಎರಡು ಪದಕಗಳನ್ನು ಪಡೆದುಕೊಂಡಿದ್ದಾರೆ.

ಮಹಿಳಾ ಸಂಯುಕ್ತ ಮುಕ್ತ ಬಿಲ್ಲುಗಾರಿಕೆ ವಿಭಾಗದಲ್ಲಿ ಭಾರತದ ಸರಿತಾ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದಾರೆ. ೧೪೩-೧೪೨ ಅಂಕಗಳಿಂದ ಸಿಂಗಾಪುರದ ನೂರ್ ಸ್ಯಾಹಿದಾ ಆಲಿಮ್ ವಿರುದ್ಧ ಜಯಭೇರಿ ಭಾರಿಸಿದ್ದಾರೆ.

ಮತ್ತೊಂದೆಡೆ, ಪುರುಷರ ಡಬ್ಲ್ಯೂ೧ ವಿಭಾಗದಲ್ಲಿ ಭಾರತದ ಆದಿಲ್ ಮಹಮ್ಮದ್ ನಾಜೀರ್ ಅನ್ಸಾರಿ ಕಂಚು ಪದಕವನ್ನು ಪಡೆದರು. ಹಾಕಾಂಗ್‌ನ ತಾಯ್ ಯುಂಗ್ ಅವರನ್ನು ಅನ್ಸಾರಿ ಅವರು ೧೨೦- ೧೧೬ ಅಂಕಗಳಿಂದ ಸೋಲಿಸಿದರು.

**********ಮುಕ್ತಾಯ*********